
## ಸುದ್ದಿಸಂಚಯ

### ಹಿಂದೂ ವಿಶ್ವಕೋಶದ ಬಿಡುಗಡೆ



ಎಡದಿಂದ, ಸ್ವಾಮಿ ಹರ್ಷಾನಂದಜಿ, ಡಾ. ಅಬ್ದುಲ್ ಕಲಾಂ ಮತ್ತು ಸ್ವಾಮಿ ಪ್ರಭಾನಂದಜಿ

೩೧ನೇ ಮೇ ೨೦೦೮ ರಂದು, ಸಂಜೆ ೫ ಗಂಟೆಗೆ ಬೆಂಗಳೂರು ರಾಮಕೃಷ್ಣ ಮಠದಲ್ಲಿರುವ ರಾಮಕೃಷ್ಣ ಸಭಾಂಗಣವು ಜನರಿಂದ ತುಂಬಿ ತುಳುಕಾಡುತ್ತಿತ್ತು. ಭಾರೀ ಮಳೆಯ ಮಧ್ಯದಲ್ಲಿಯೂ ಸಾವಿರಾರು ಜನರು ಉತ್ಸಾಹಭರಿತರಾಗಿ, ಸ್ವಾಮಿ ಹರ್ಷಾನಂದಜಿ ಮಹಾರಾಜ್ ಅವರ, ಇಂಗ್ಲೀಷಿನಲ್ಲಿರುವ **'ಸಂಕ್ಷಿಪ್ತ ಹಿಂದೂ ವಿಶ್ವಕೋಶದ ಬಿಡುಗಡೆಯ ಸಮಾರಂಭ'** ದಲ್ಲಿ ಪಾಲ್ಗೊಂಡಿದ್ದರು. ಮೂರು ಸಂಪುಟಗಳಲ್ಲಿರುವ ಈ ವಿಶ್ವಕೋಶವನ್ನು ಭಾರತದ ಮಾಜಿ ರಾಷ್ಟ್ರಪತಿಗಳಾದ ಭಾರತರತ್ನ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಬಿಡುಗಡೆ ಮಾಡಿದರು. ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಪೂಜ್ಯ ಸ್ವಾಮಿ ಪ್ರಭಾನಂದಜಿ ಮಹಾರಾಜ್ ಅವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಭಾಷಣ ಮಾಡಿದ ಶ್ರೀ ಕಲಾಂ ಅವರು ವಿಶ್ವಕೋಶದ ವೈಶಿಷ್ಟ್ಯಗಳನ್ನು ಕೊಂಡಾಡಿದರು. ಸ್ವಾಮಿ ಪ್ರಭಾನಂದಜಿ ಅವರು ಈಗಾಗಲೇ ಪ್ರಕಟವಾಗಿರುವ ಕೆಲವು ಹಿಂದೂ ವಿಶ್ವಕೋಶಗಳ ಬಗ್ಗೆ ಮಾಹಿತಿಯನ್ನು ನೀಡುತ್ತ, ಪ್ರಸ್ತುತ ರಚನೆಯ ಮಹತ್ವವನ್ನು ವಿವರಿಸಿದರು. ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಯೊಬ್ಬರು ಈ ಬಗೆಯ ಯೋಜನೆಯನ್ನು ಏಕಾಂಗಿಯಾಗಿ ಕೈಕೊಂಡು, ಯಶಸ್ವಿಯಾಗಿರುವುದು ಇದೇ ಮೊದಲು ಎಂದು ಕೊಂಡಾಡಿದರು. ನಂತರ ಮಾತನಾಡಿದ ಸ್ವಾಮಿ ಹರ್ಷಾನಂದಜಿ ಅವರು ಈ ಕಾರ್ಯವನ್ನು ಸಮಾಪ್ತಿಗೊಳಿಸಿದ ನಂತರ, ತಮ್ಮಲ್ಲಿ ವಿನಮ್ರಭಾವನೆ ಮೂಡಿದೆ ಎಂದು ಹೇಳಿದರು. ಅದಲ್ಲದೆ ಈ ಕೃತಿಯನ್ನು ಶ್ರೀಶಾರದಾದೇವಿಯವರಿಗೆ ಸಮರ್ಪಿಸಿರುವ ಔಚಿತ್ಯವನ್ನು ವಿವರಿಸಿದರು.

ಚಳ್ಳಕೆರೆ ಸಹೋದರರ ವೇದಪಾರಾಯಣದಿಂದ ಸಮಾರಂಭ ಆರಂಭಗೊಂಡಿತು. ಸ್ವಾಮಿ ರಾಘವೇಶಾನಂದಜಿ ಮಹಾರಾಜ್ ಅವರು ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಅವರ ಸಂದೇಶವನ್ನು ಓದಿ ಹೇಳಿ, ನಂತರ ಸ್ವಾಗತ ಭಾಷಣ ಮಾಡಿದರು. ಕಡೆಯಲ್ಲಿ, ಸ್ವಾಮಿ ಶಾಂತಿಮಯಾನಂದಜಿ ಮಹಾರಾಜ್ ಅವರು ಎಲ್ಲರಿಗೂ ವಂದಿಸಿದರು. ಈ ಬೃಹದ್ ಯೋಜನೆಯಲ್ಲಿ ಕಾರ್ಯ ನಿರ್ವಹಿಸಿದವರಿಗೆ ನೆನಪಿನ ಕಾಣಿಕೆಗಳನ್ನು ಕೊಟ್ಟು ಗೌರವಿಸಲಾಯಿತು. ಸುಮಾರು ೪,೦೦೦ಕ್ಕೂ ಹೆಚ್ಚು ಭಕ್ತರು ಬಹಳ ಶಿಸ್ತಿನಿಂದ ಭಾಗವಹಿಸಿದ್ದ ಈ ಅದ್ಭುತ ಕಾರ್ಯಕ್ರಮದ ಉಸ್ತುವಾರಿಯನ್ನು ಆಶ್ರಮದ ಸ್ವಯಂಸೇವಕರು ಬಹಳ ದಕ್ಷತೆಯಿಂದ ನಿರ್ವಹಿಸಿದರು. ಶ್ರೀ ಅಬ್ದುಲ್ ಕಲಾಂ ಅವರ ಉಪಸ್ಥಿತಿಯು ಇಡೀ ವಾತಾವರಣವನ್ನು ಚೇತನಾದಾಯಕ ಮತ್ತು ಆನಂದಮಯವನ್ನಾಗಿಸಿತ್ತು.

### ಡಾ. ಎ.ಪಿ.ಜೆ.ಅಬ್ದುಲ್ ಕಲಾಮ್ ಅವರು ಮಾಡಿದ ಭಾಷಣದ ಸಾರಾಂಶ

ಸ್ವಾಮಿ ಹರ್ಷಾನಂದಜಿಯವರ ಈ ವಿಶ್ವಕೋಶ ನಿಜಕ್ಕೂ ಒಂದು ಜೀವಮಾನದ ಕೊಡುಗೆ. ಭೂತಕಾಲ ವರ್ತಮಾನವನ್ನು ಸಂಧಿಸುತ್ತದೆ ಮತ್ತು ಭವಿಷ್ಯವನ್ನು ನಿರ್ಮಿಸುತ್ತದೆ ಎಂಬುದರ ಸಂಕೇತವಾಗಿದೆ ಇದು.

ಹಿಂದೂಧರ್ಮದ ವಿಕಾಸ ೭೦೦೦ ವರ್ಷಗಳಿಗಿಂತಲೂ ಪ್ರಾಚೀನವಾಗಿದ್ದು ವೇದಗಳು ಮಾನವ ಜೀವನದ ವಿವಿಧ ಮುಖಗಳಲ್ಲಿ ಧರ್ಮವನ್ನು ಸಮೃದ್ಧಗೊಳಿಸಿವೆ. ಈ ವಿಶ್ವಕೋಶ ಪಂಡಿತರಿಗೆ, ವಿದ್ಯಾರ್ಥಿಗಳಿಗೆ, ಸಾಧಕರಿಗೆ ಅಧಿಕೃತ ಆಕರಗ್ರಂಥವಾಗಲಿದ್ದು, ಹಿಂದೂಧರ್ಮದ ಬಗೆಗಿನ ತಿಳಿವಳಿಕೆಯನ್ನು ಹೆಚ್ಚಿಸುವುದರ ಮೂಲಕ ಸಮಾಜದ ಸಮೃದ್ಧಿಗೆ ಕಾರಣವಾಗಲಿದೆ.

ಈ ವಿಶ್ವಕೋಶದಲ್ಲಿ ಸ್ವಾಮೀಜಿಯವರು ನೀಡಿರುವ ಭಗವಂತನ ಪರಿಕಲ್ಪನೆಯ ವಿವರಣೆ ಅನನ್ಯವಾಗಿದೆ. ಇದು, ನಾನು ಪ್ರತಿದಿನ ನನ್ನ ನಮಾಜಿನಲ್ಲಿ ಸ್ಮರಿಸುವ ಅಲ್ಲಾಹುವಿನ ಹತ್ತಿರವಾಗಿದೆ. ಸೃಷ್ಟಿಗೆ ಆಧಾರವಾದದ್ದು ಧರ್ಮ. ಜೀವನದ ಒಂದೊಂದು ಹಂತಕ್ಕೂ ಅದು ಬೇರೆಬೇರೆ ಕರ್ಮಗಳನ್ನು ವಿಧಿಸುತ್ತದೆ.

ಅಂತರಂಗದಲ್ಲಿ ಧರ್ಮವಿದ್ದರೆ ಚಾರಿತ್ರ್ಯದಲ್ಲಿ ಸೌಂದರ್ಯವಿರುತ್ತದೆ<br>
ಚಾರಿತ್ರ್ಯದಲ್ಲಿ ಸೌಂದರ್ಯವಿದ್ದರೆ ಮನೆಯಲ್ಲಿ ಸಾಮರಸ್ಯವಿರುತ್ತದೆ<br>
ಮನೆಯಲ್ಲಿ ಸಾಮರಸ್ಯವಿದ್ದರೆ ರಾಷ್ಟ್ರದಲ್ಲಿ ವ್ಯವಸ್ಥೆಯಿರುತ್ತದೆ<br>
ರಾಷ್ಟ್ರದಲ್ಲಿ ವ್ಯವಸ್ಥೆಯಿದ್ದರೆ ಜಗತ್ತಿನಲ್ಲಿ ಶಾಂತಿಯಿರುತ್ತದೆ.

ಮೀರತ್‌ನಲ್ಲಿ ನಾನು ೬೦-೭೦ ಸದಸ್ಯರ ಅವಿಭಕ್ತ ಕುಟುಂಬವೊಂದನ್ನು ನೋಡಿದೆ. ಈ ಕುಟುಂಬವ್ಯವಸ್ಥೆಯ ಮುಖ್ಯತತ್ವಗಳು: ೧. ಎಲ್ಲರನ್ನೂ ದೇವರೆಂದು ಕಾಣುವುದು; ೨. ದೇವರ ಕರುಣೆಯಲ್ಲಿ ಶ್ರದ್ಧೆ; ೩. ದೇವರ ನಾಮಸ್ಮರಣೆಯಲ್ಲಿ ನಿಷ್ಠೆ.

ರಾಮಕೃಷ್ಣ ಮಿಷನ್ನಿನೊಂದಿಗೆ ನನ್ನದು ವಿಶೇಷ ಬಾಂಧವ್ಯ. ವಿವೇಕಾನಂದರ ಜಯಂತಿಯಂದು ದೇಶದ ಹಲವೆಡೆ ಮಿಷನ್ನಿನ ಹಲವಾರು ಸಂಸ್ಥೆಗಳ ಸಮಾರಂಭದಲ್ಲಿ ನಾನು ಪಾಲ್ಗೊಂಡಿದ್ದೇನೆ. ಸರ್ವಧರ್ಮಗಳ ಸಂಶೋಧನಾತ್ಮಕ ಪ್ರಕಟಣೆಗಳಿಗೆ ರಾಮಕೃಷ್ಣ ಮಿಷನ್ ಹೆಸರುವಾಸಿಯಾಗಿದೆ. ಶ್ರೀರಾಮಕೃಷ್ಣ-ವಿವೇಕಾನಂದರ ಆಧ್ಯಾತ್ಮಿಕ ಬೋಧನೆಗಳಿಂದ ನಾನು ಪ್ರಭಾವಿತನಾಗಿದ್ದೇನೆ. 'ಆಳಕ್ಕೆ ಮುಳುಗಬೇಕು' ಎಂದರು ಶ್ರೀರಾಮಕೃಷ್ಣರು. 'ಹೆಸರಿಗಿಂತ ತತ್ವ ಮುಖ್ಯ' ಎಂದರು ಸ್ವಾಮಿ ವಿವೇಕಾನಂದರು. ರಾಮಕೃಷ್ಣ ಮಿಷನ್ ದೇಶವಿದೇಶಗಳಲ್ಲಿ ಈ ಸಂದೇಶವನ್ನು ಹರಡುತ್ತಿದೆ. ಸ್ವಾಮಿ ಹರ್ಷಾನಂದಜಿಯವರಿಂದ ವಿಶ್ವಕೋಶದ ಮೊದಲ ಪ್ರತಿಯನ್ನು ಸ್ವೀಕರಿಸಲು ಸಂತೋಷವೆನಿಸುತ್ತದೆ. ಅಧ್ಯಾತ್ಮದ ಮೂಲಕ ಎಲ್ಲರ ಮನಸ್ಸನ್ನು ಒಗ್ಗೂಡಿಸುವ ಕಾರ್ಯದಲ್ಲಿ ನಿರತವಾಗಿರುವ ರಾಮಕೃಷ್ಣ ಸಂಘಕ್ಕೆ ನನ್ನ ಶುಭಕಾಮನೆಗಳು (ಅನುವಾದ: ಎಚ್. ಎನ್.ಮುರಳೀಧರ)